153-72-66

# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ**: ಬೆಂಗಳೂರು ಟ್ರಾಫಿಕ್ ಸಮಸ್ಯೆ ನಿವಾರಿಸುವ ಸಲುವಾಗಿ ಜಾರಿಗೆ ತಂದಿರುವ ಮಹತ್ವಾಕಾಂಕ್ಷಿ ರಿಂಗ್ ರಸ್ತೆಯ 3ನೇ ಹಂತದ, ಜೆ.ಪಿ. ನಗರ, ಮೈಸೂರು ರಸ್ತೆ, ಹೆಬ್ಬಾಳದವರೆಗಿನ ಮೆಟ್ರೋ ರೈಲು ಯೋಜನೆಯ ಅನುದಾನ ಕಳೆದ 4-5 ವರ್ಷಗಳಿಂದಲೂ ತುಂಬಾ ವಿಳಂಬವಾಗಿರುವುದರಿಂದ ರಿಂಗ್ ರಸ್ತೆಯಲ್ಲಿನ ಟ್ರಾಫಿಕ್ ಜಾಮ್‌ನಿಂದಾಗಿ ಸಾರ್ವಜನಿಕ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗಿರುತ್ತದೆ. ಆದುದರಿಂದ ಅದರ ನಿವಾರಣೆಗೆ ಕೂಡಲೇ 3ನೇ ಹಂತದ ಯೋಜನೆ ಪ್ರಾರಂಭಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ಸದರಿ ಯೋಜನೆಯ ವಿಶ್ರುತ ಮಾಹಿತಿ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

**: ಉತ್ತರ :**

ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-3ರಲ್ಲಿ ಜೆ.ಪಿ. ನಗರ 4ನೇ ಹಂತದಿಂದ ಕೆಂಪಾಪುರದವರೆಗೆ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗೆ 44.65 ಕಿ.ಮೀ.ಗಳ ಉದ್ದದ ಹೊಸ ಮೆಟ್ರೋ ಕಾರಿಡಾರ್‌ನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ಈ ಪೈಕಿ ಪಶ್ಚಿಮ ಓ.ಆರ್.ಆರ್ ಮಾರ್ಗದಲ್ಲಿ 32.15 ಕಿ.ಮೀ.ಗಳು ಹಾಗೂ ಜೆ.ಪಿ. ನಗರ 4ನೇ ಹಂತದಿಂದ ಕೆಂಪಾಪುರದವರೆಗೆ ವೃತ್ತಾಕಾರದ ರಿಂಗ್ ರಸ್ತೆಯಲ್ಲಿ ಮೆಟ್ರೋ ಸೇವೆಯನ್ನು ಒದಗಿಸಲಾಗುತ್ತದೆ.

ಸದರಿ ಯೋಜನೆಯ ಕುರಿತಂತೆ ವಿಸ್ತೃತ ಮಾಹಿತಿಯು ಈ ಕೆಳಗಿನಂತಿದೆ:

- ಮೆಟ್ರೋ ರೈಲು ಯೋಜನೆ ಹಂತ-3ರ ಅನುಷ್ಠಾನಕ್ಕಾಗಿ ಆದೇಶ ಸಂಖ್ಯೆ: UDD 230 PRJ 2021, ದಿನಾಂಕ:15.03.2024 ರಲ್ಲಿ ಸರ್ಕಾರದ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯ ಅನುಮೋದನೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆ ಬಾಕಿ ಇರುತ್ತದೆ.
- ಮೆಟ್ರೋ ರೈಲು ಯೋಜನೆಯ ಹಂತ-3 ರಲ್ಲಿ ಹೆಚ್ಚುವರಿಯಾಗಿ ಹೊಸಹಳ್ಳಿ ಮೆಟ್ರೋ ನಿಲ್ದಾಣದಿಂದ ಕಡಬಗೆರೆವರೆಗೆ ಮಾಗಡಿ ರಸ್ತೆ ಮುಖಾಂತರ 12.50 ಕಿ.ಮೀ.ಗಳ ಉದ್ದದ ಮೆಟ್ರೋ ಮಾರ್ಗವನ್ನು ವಿಸ್ತರಿಸಲು ಸಹ ಯೋಜಿಸಲಾಗಿದೆ.

ಪ್ರಸ್ತುತ, ಯೋಜನೆಯ ಪ್ರಾಥಮಿಕ ಚಟುವಟಿಕೆಗಳಾದ Land Acquisition, Re-habitation and Re-Settlement (R&R), Shifting of Utilities ಮುಂತಾದ ಚಟುವಟಿಕೆಗಳನ್ನು (Preliminary Activities) ಈಗಾಗಲೇ ಪ್ರಾರಂಭಿಸಲಾಗಿದೆ.

ಕಡತ ಸಂಖ್ಯೆ: ನಅಇ 99 ಪಿ.ಆರ್.ಜೆ 2024

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ